ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು–570017
Telephone No: 0821–234338

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmhrd@cescmysore.org

Company Identity Number[CIN]:- **U40109KA2004SGC035177**

ಕ್ರಮಾಂಕ: ಸೆಸ್ಕ್/ತರಬೇತಿ/03/04/2022–2023/ CYS-836 ದಿನಾಂಕ: 24 AUG 2022

## ಅಧಿಕೃತ ಜ್ಞಾಪನ

**ವಿಷಯ :** ಸರಕು ಮತ್ತು ಸೇವಾ ತೆರಿಗೆ (GST) ಕುರಿತು ನಡೆಯಲಿರುವ ಎರಡು ದಿನಗಳ ವಸತಿಸಹಿತ ತರಬೇತಿ ಕಾರ್ಯಕ್ರಮಕ್ಕೆ ಅಧಿಕಾರಿಗಳನ್ನು ನಿಯೋಜಿಸುವ ಬಗ್ಗೆ.

**ಉಲ್ಲೇಖ :** ನಿರ್ದೇಶಕರು, FPI ಬೆಂಗಳೂರು, ಇವರ ಪತ್ರ ಸಂಖ್ಯೆ: FPI/ACDM0TRG(ATC)/33/2022-23 Dtd : 16.08.2022.

********

ವಿತ್ತೀಯ ಕಾರ್ಯನೀತಿ ಸಂಸ್ಥೆ (FPI), ಕೆಂಗೇರಿ, ಬೆಂಗಳೂರು ರವರ ವತಿಯಿಂದ **"ಸರಕು ಮತ್ತು ಸೇವಾ ತೆರಿಗೆ (GST)"** ವಿಷಯದ ಕುರಿತು **ದಿನಾಂಕ : 02.09.2022 ಮತ್ತು 03.09.2022** ರಂದು ಆಯೋಜಿಸಿರುವ ಎರಡು (2) ದಿನಗಳ ವಸತಿಸಹಿತ ತರಬೇತಿ ಕಾರ್ಯಕ್ರಮಕ್ಕೆ ಚಾವಿಸನಿನಿಯ ಈ ಕೆಳಕಂಡ ಅಧಿಕಾರಿಗಳನ್ನು ನಿಯೋಜಿಸಲಾಗಿದೆ.

ಸದರಿ ಎರಡು ದಿನಗಳ ತರಬೇತಿ ಕಾರ್ಯಕ್ರಮವು ಪೂರ್ವಾಹ್ನ 10.00 ರಿಂದ ಅಪರಾಹ್ನ 05.30ರವರೆಗೆ ನಡೆಯಲಿದ್ದು, ನಿಯೋಜಿತ ಅಧಿಕಾರಿಗಳು ದಿನಾಂಕ : 02.09.2022ರಂದು ಪೂರ್ವಾಹ್ನ 09.00 ಗಂಟೆಗೆ ವರದಿ ಮಾಡಿಕೊಂಡು ತರಬೇತಿಯಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವಂತೆ ಈ ಮೂಲಕ ಸೂಚಿಸಲಾಗಿದೆ.

| ಕ್ರ.ಸಂ. | ಅಧಿಕಾರಿಯ ಹೆಸರು – ಶ್ರೀ/ ಶ್ರೀಮತಿ | ಹುದ್ದೆ ಮತ್ತು ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|
| 1 | ಲೋಕೇಶ್ .ಎಸ್. | ಸಹಾಯಕ ಪ್ರಧಾನ ವ್ಯವಸ್ಥಾಪಕರು, ಖರೀದಿ ಶಾಖೆ, ನಿಗಮ ಕಾರ್ಯಾಲಯ |
| 2 | ಮಹೇಶ್ ಚಂದ್ರ ಎಂ.ಪಿ. | ಸಹಾಯಕ ಪ್ರಧಾನ ವ್ಯವಸ್ಥಾಪಕರು, ಆಡಳಿತ ಮತ್ತು ಮಾನವ ಸಂಪನ್ಮೂಲ ಶಾಖೆ, ನಿಗಮ ಕಾರ್ಯಾಲಯ |
| 3 | ಮಂಜುನಾಥ .ಆರ್. | ಸಹಾಯಕ ಪ್ರಧಾನ ವ್ಯವಸ್ಥಾಪಕರು, ಯೋಜನಾ ಶಾಖೆ, ನಿಗಮ ಕಾರ್ಯಾಲಯ |
| 4 | ಚಿತ್ರಾವತಿ .ಎಂ.ವಿ. | ಸಹಾಯಕ ಪ್ರಧಾನ ವ್ಯವಸ್ಥಾಪಕರು, ತೆರಿಗೆ ಶಾಖೆ, ನಿಗಮ ಕಾರ್ಯಾಲಯ |
| 5 | ಸುರೇಶ್ .ಡಿ. | ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ವಿ.ವಿ. ಮೊಹಲ್ಲಾ |
| 6 | ಜ್ಯೋತಿ | ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಲಯ, ಹಾಸನ |
| 7 | ಗುರುಮೂರ್ತಿ .ಡಿ.ಎಲ್. | ಲೆಕ್ಕಾಧಿಕಾರಿ (ಆಂ.ಪ), ಕಾರ್ಯ ಮತ್ತು ಪಾಲನಾ ವಿಭಾಗ, ಹಾಸನ |
| 8 | ಪ್ರಕಾಶ್ .ಎಂ. | ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಪಾಂಡವಪುರ |
| 9 | ಮಾದೇಶ .ಎಂ.ಎಸ್. | ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಎನ್ ಆರ್ ಮೊಹಲ್ಲಾ |
| 10 | ನರೇಂದ್ರ | ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಚನ್ನರಾಯಪಟ್ಟಣ |
| 11 | ಪರಮೇಶ .ಎಸ್. | ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಹುಣಸೂರು |
| 12 | ಭಾಸ್ಕರ್ .ಆರ್. | ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಚಾಮರಾಜನಗರ |
| 13 | ರಘು .ಆರ್. | ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಮದ್ದೂರು |
| 14 | ರವಿಕುಮಾರ .ಟಿ. | ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ನಂಜನಗೂಡು |



Scanned by CamScanner

| ಕ್ರ.ಸಂ. | ಅಧಿಕಾರಿಯ ಹೆಸರು – ಶ್ರೀ/ ಶ್ರೀಮತಿ | ಹುದ್ದೆ ಮತ್ತು ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|
| 15 | ರವಿಚಂದ್ರನ್ .ಜಿ.ವಿ. | ಲೆಕ್ಕಾಧಿಕಾರಿ (ಆಂ.ಪ), ಕಾರ್ಯ ಮತ್ತು ಪಾಲನಾ ವಿಭಾಗ, ಮಂಡ್ಯ |
| 16 | ಶಿವಕುಮಾರ್ .ಎಸ್. | ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಮಂಡ್ಯ |
| 17 | ಪುಟ್ಟರಾಜ | ವ್ಯವಸ್ಥಾಪಕರು, ತೆರಿಗೆ ಶಾಖೆ, ನಿಗಮ ಕಾರ್ಯಾಲಯ |
| 18 | ಬಸವಣ್ಣ .ಕೆ.ಎನ್. | ವ್ಯವಸ್ಥಾಪಕರು, ಕಂದಾಯ ಶಾಖೆ, ನಿಗಮ ಕಾರ್ಯಾಲಯ |
| 19 | ನಾಗೇಂದ್ರ ಪ್ರಸಾದ್ .ಎನ್. | ವ್ಯವಸ್ಥಾಪಕರು, ಕಾನೂನು ಶಾಖೆ, ನಿಗಮ ಕಾರ್ಯಾಲಯ |
| 20 | ಸಹನಾ ಕುಬೇರ್ | ವ್ಯವಸ್ಥಾಪಕರು, ಆಂತರಿಕ ನಿರ್ವಹಣೆ ಶಾಖೆ, ನಿಗಮ ಕಾರ್ಯಾಲಯ |
| 21 | ನಾಗೇಶ್ .ಎಂ.ಆರ್. | ವ್ಯವಸ್ಥಾಪಕರು, ತರಬೇತಿ ಶಾಖೆ, ನಿಗಮ ಕಾರ್ಯಾಲಯ |
| 22 | ಅರ್ಚನಾ .ವಿ. | ಸಹಾಯಕ ಲೆಕ್ಕಾಧಿಕಾರಿ (ಆಂ.ಪ), ಕಾರ್ಯ ಮತ್ತು ಪಾಲನಾ ವಿಭಾಗ, ಎನ್ ಆರ್ ಮೊಹಲ್ಲಾ |
| 23 | ದೇವರಾಜು | ಸಹಾಯಕ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಅರಸೀಕೆರೆ |
| 24 | ಪ್ರದೀಪ್ .ಸಿ.ಎನ್. | ಸಹಾಯಕ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಹೊಳೆನರಸೀಪುರ |
| 25 | ಯತೀಶ್ .ಸಿ.ಬಿ. | ಸಹಾಯಕ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಮಡಿಕೇರಿ |
| 26 | ಶಿವಕುಮಾರ್ | ಸಹಾಯಕ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಕೆ.ಆರ್.ಪೇಟೆ |
| 27 | ವಿಜಯಕುಮಾರ್ .ಕೆ.ಎಂ. | ಸಹಾಯಕ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಹಾಸನ |
| 28 | ವಿನೋದ್ ಕುಮಾರ್ | ಸಹಾಯಕ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಕೊಳ್ಳೇಗಾಲ |
| 29 | ನಾಗರಾಜ .ಎಚ್. | ಸಹಾಯಕ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ನಾಗಮಂಗಲ |
| 30 | ಅಬ್ದುಲ್ ಬಾರಿ ಶಹಬಾಜ್ | ಸಹಾಯಕ ಲೆಕ್ಕಾಧಿಕಾರಿ (ಆಂ.ಪ), ಕಾರ್ಯ ಮತ್ತು ಪಾಲನಾ ವಿಭಾಗ, ಮಂಡ್ಯ |
| 31 | ಡೆನ್ಸಿಲ್ ಗ್ಲೋರಿಯಾ ಡೆನಿಸ್ | ಸಹಾಯಕ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ಉಪವಿಭಾಗ, ಸಿಎಸ್‌ಡಿ–ಹಾಸನ |
| 32 | ಸಂತೋಷಕುಮಾರ್ .ಎನ್.ಎಸ್. | ಸಹಾಯಕ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ಉಪವಿಭಾಗ, ಮಡಿಕೇರಿ |

ವಿತ್ತೀಯ ಕಾರ್ಯನೀತಿ ಸಂಸ್ಥೆ ರವರು ನೀಡಿರುವ ಪ್ರಮಾಣಿತ ಕಾರ್ಯಾಚರಣಾ ವಿಧಾನ (Standard Operating Procedure) ಹಾಗೂ Annexure-1ಅನ್ನು ತರಬೇತಿಗೆ ನಿಯೋಜಿಸಿರುವ ಅಧಿಕಾರಿಗಳ ಅನುಪಾಲನೆಗಾಗಿ ಈ ಅಧಿಕೃತ ಜ್ಞಾಪನದೊಂದಿಗೆ ಲಗತ್ತಿಸಲಾಗಿದೆ.

ಮುಂದುವರೆಯುತ್ತಾ, ತರಬೇತಿ ಕಾರ್ಯಕ್ರಮದ ಬಗ್ಗೆ ಹೆಚ್ಚಿನ ಮಾಹಿತಿಯ ಅಗತ್ಯವಿದ್ದಲ್ಲಿ, ತರಬೇತಿ ಸಂಯೋಜಕರಾದ ಶ್ರೀ ಬಿ.ಎನ್. ಬಿರಾದಾರ (ಮೊಬೈಲ್ ಸಂಖ್ಯೆ : 94498–34338) ಸಮಾಲೋಚಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು ಇವರನ್ನು ಸಂಪರ್ಕಿಸಬಹುದಾಗಿರುತ್ತದೆ.

ಸದರಿ ಅಧಿಕಾರಿಗಳು ನಿಗಮದ ನಿಯಾಮಾನುಸಾರ ಭತ್ಯೆಗೆ ಅರ್ಹರಿರುತ್ತಾರೆ.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ
ಅನುಮೋದಿಸಲ್ಪಟ್ಟಿದೆ.

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ)
ಚಾವಿಸನಿನಿ, ಮೈಸೂರು.

ಪ್ರತಿಗಳು:

- ನಿರ್ದೇಶಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ, ಕೆಂಗೇರಿ, ಬೆಂಗಳೂರು – 560 060 ರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.



Scanned by CamScanner

- ಮುಖ್ಯ ಪ್ರಧಾನ ವ್ಯವಸ್ಥಾಪಕರು (ಆಂ.ಪ), ನಿಗಮ ಕಾರ್ಯಾಲಯ, ಮೈಸೂರುರವರ ಅವಗಾಹನೆಗಾಗಿ.
- ಮುಖ್ಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಲಯ, ಮೈಸೂರು ಮತ್ತು ಹಾಸನ ರವರ ಅವಗಾಹನೆಗಾಗಿ.
- ಪ್ರಧಾನ ವ್ಯವಸ್ಥಾಪಕರು, ಖರೀದಿ ಶಾಖೆ/ ಯೋಜನಾ ಶಾಖೆ/ ಲೆಕ್ಕ & ಕಂದಾಯ ಶಾಖೆ, ನಿಗಮ ಕಾರ್ಯಾಲಯ, ಮೈಸೂರುರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
- ಅಧೀಕ್ಷಕರ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವೃತ್ತ, ಮೈಸೂರು/ಚಾ.ನಗರ–ಕೊಡಗು/ಮಂಡ್ಯ/ಹಾಸನ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
- ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನಾ ವಿಭಾಗ ವಿ.ವಿ.ಮೊಹಲ್ಲಾ/ ಎನ್.ಆರ್.ಮೊಹಲ್ಲಾ/ ಹುಣಸೂರು/ ನಂಜನಗೂಡು/ ಹಾಸನ/ ಅರಸೀಕೆರೆ/ ಚನ್ನರಾಯಪಟ್ಟಣ/ ಹೊಳೆನರಸೀಪುರ/ ಚಾಮರಾಜನಗರ/ ಕೊಳ್ಳೇಗಾಲ/ ಮಡಿಕೇರಿ/ ಮಂಡ್ಯ/ ಮದ್ದೂರು/ ಪಾಂಡವಪುರ/ ಕೆ.ಆರ್.ಪೇಟೆ/ ನಾಗಮಂಗಲ ಮೈಸೂರು ಚಾವಿಸನಿನಿ ಮೈಸೂರು ಅವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
- ಉಪ್ರವ್ಯ, MIS ಶಾಖೆ, ನಿಗಮ ಕಾರ್ಯಾಲಯ, ಮೈಸೂರು ಅವರ ಮಾಹಿತಿಗಾಗಿ ಹಾಗೂ ನಿಗಮದ WEBSITE ನಲ್ಲಿ UPLOAD ಗಾಗಿ.
- ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ತಾಂ)/ ಮುಖ್ಯ ಆರ್ಥಿಕ ಅಧಿಕಾರಿರವರುಗಳ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತ, ಪತ್ರದಲ್ಲಿನ ಅಂಶಗಳನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ತಾಂ)/ ಮುಖ್ಯ ಆರ್ಥಿಕ ಅಧಿಕಾರಿರವರುಗಳ ಗಮನಕ್ಕೆ ತರುವಂತೆ ಕೋರಿದೆ.
- ಸಂಬಂಧಿಸಿದ ಅಧಿಕಾರಿಗಳಿಗೆ.
- ಕಛೇರಿ ಪ್ರತಿ/ಮು.ಕ



Scanned by CamScanner

ಕರ್ನಾಟಕ ಸರ್ಕಾರ

ವಿತ್ತೀಯ ಕಾರ್ಯನೀತಿ ಸಂಸ್ಥೆ

# ಸಂಸ್ಥೆಯ ಆವರಣದಲ್ಲಿ ತರಬೇತಿ ನಡೆಸುವ ಸಂಬಂಧ ಪ್ರಮಾಣಿತ ಕಾರ್ಯಚರಣಾ ವಿಧಾನ (Standard Operating Procedure-SoP)

ಸಂಸ್ಥೆಯ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಪ್ರಶಿಕ್ಷಣಾರ್ಥಿಗಳು ಸಂಸ್ಥೆಯ ಆವರಣದಲ್ಲಿ ಮತ್ತು ತರಬೇತಿ ಕೊಠಡಿಗಳಲ್ಲಿ ಕೋವಿಡ್-19 ಸಂಬಂಧ ಕಡ್ಡಾಯವಾಗಿ ಅನುಸರಿಸಬೇಕಾಗಿರುವ ಸೂಚನೆಗಳು:-

1. ತರಬೇತಿಯು ವಸತಿ ಸಹಿತವಾಗಿದ್ದು, ತರಬೇತಿಯ ಅವಧಿಯಲ್ಲಿ ಪ್ರಶಿಕ್ಷಣಾರ್ಥಿಗಳು ಸಂಸ್ಥೆಯ ವಸತಿ ನಿಲಯದಲ್ಲಿ ಒಂದು ಕೊಠಡಿಗೆ ಒಬ್ಬರಂತೆ ಮಾತ್ರ ವಾಸ್ತವ್ಯ ಮಾಡಬೇಕಾಗಿರುತ್ತದೆ.
2. ಕೋವಿಡ್ – 19 ಪಾಸಿಟಿವ್ ಇರುವ ವ್ಯಕ್ತಿಗಳು/ಅಂತಹ ವ್ಯಕ್ತಿಗಳ ಸಂಪರ್ಕದಲ್ಲಿ ಇತ್ತೀಚೆಗೆ ಇದ್ದವರು ತರಬೇತಿಗೆ ಹಾಜರಾಗತಕ್ಕದಲ್ಲ.
3. ತರಬೇತಿಗೆ ಹಾಜರಾದ ಪ್ರಶಿಕ್ಷಣಾರ್ಥಿಗಳು ನಿಗದಿತ ನಮೂನೆಯಲ್ಲಿ ಕೋವಿಡ್-19 ಸಂಬಂಧ ಸ್ವಯಂ ಘೋಷಣಾಪತ್ರವನ್ನು (Self Declaration) ಭರ್ತಿಮಾಡಿ ತರಬೇತಿ ಸಂಯೋಜಕರಿಗೆ ನೀಡುವುದು ಹಾಗೂ ಎರಡು ಬಾರಿ ಲಸಿಕೆ ಪಡೆದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು.
4. ಅಭ್ಯರ್ಥಿಗಳಿಂದ ಪಡೆಯಲಾದ ಲಸಿಕೆ ಪ್ರಮಾಣ ಪತ್ರಗಳು ಮತ್ತು ಸ್ವಯಂ ಘೋಷಣಾಪತ್ರಗಳನ್ನು ತರಬೇತಿ ಸಮಾಲೋಚಕರು ಅಭ್ಯರ್ಥಿಗಳ ನೋಂದಣಿ ದಿನವೇ ಸಂಗ್ರಹಿಸಿ ಹಾಸ್ಟೆಲ್ ವಾರ್ಡನ್‌ರವರಿಗೆ ನಿಗಾವಣೆಗೆ ನೀಡುವುದು.
5. ಅಭ್ಯರ್ಥಿಗಳು ತಮಗೆ ಅಗತ್ಯವಿರುವ / ಸೇವಿಸುತ್ತಿರುವ ಔಷಧಿಗಳ ಅಗತ್ಯ ಪ್ರಮಾಣಗಳನ್ನು ತರಬೇತಿಗೆ ಬರುವಾಗ ತರತಕ್ಕದ್ದು.
6. ಪ್ರಶಿಕ್ಷಣಾರ್ಥಿಗಳು ತಮಗೆ ನಿಗದಿ ಪಡಿಸಿದ ವಸತಿ ನಿಲಯದ ಕೊಠಡಿಯಲ್ಲಿಯೇ ಕಡ್ಡಾಯವಾಗಿ ವಾಸ್ತವ್ಯ ಮಾಡತಕ್ಕದ್ದು. ಯಾವುದೇ ಕಾರಣಕ್ಕೂ ಕೊಠಡಿ ಹಂಚಿಕೆ ಮಾಡಿದ ನಂತರ ಬದಲಾವಣೆಗೆ ಅವಕಾಶವಿರುವುದಿಲ್ಲ ಹಾಗೂ ಯಾವುದೇ ವೇಳೆ ಒಂದು ಕೊಠಡಿಯಿಂದ ಇನ್ನೊಂದು ಕೊಠಡಿಗೆ ಹೋಗುವುದನ್ನು ನಿಷೇಧಿಸಲಾಗಿದೆ.
7. ಭೋಜನಾಲಯದಲ್ಲಿ ಊಟ/ ಉಪಹಾರ ಬಡಿಸಲಾಗುವುದು, ಸದ್ಯದ ಪರಿಸ್ಥಿತಿಯಲ್ಲಿ ಸ್ವಸಹಾಯ ವ್ಯವಸ್ಥೆ ಇರುವುದಿಲ್ಲ. ಪ್ರತಿಯೊಬ್ಬರಿಗೆ ಪ್ರತ್ಯೇಕ ಸ್ಥಳವನ್ನು ಗುರುತಿಸಿ ಸಂಖ್ಯೆಗಳನ್ನು ನೀಡಲಾಗುವುದು. ಪ್ರಶಿಕ್ಷಣಾರ್ಥಿಗಳು ತಮಗೆ ಭೋಜನಕ್ಕೆ ನಿಗದಿಪಡಿಸಿದ ಆಸನದಲ್ಲಿಯೇ ಸಾಮಾಜಿಕ ಅಂತರ ಕಾಪಾಡುವುದರೊಂದಿಗೆ ಊಟೋಪಚಾರ ಮಾಡುವುದು.
8. ಆಹಾರವನ್ನು ಅವಶ್ಯಕತೆಗೆ ತಕ್ಕಂತೆ ಪಡೆದುಕೊಳ್ಳುವುದು. ಆಹಾರ ಸೇವನೆಗೆ ಯಾವುದೇ ಪ್ರಮಾಣದ ಮಿತಿ ಇರುವುದಿಲ್ಲ ಆದರೆ ಬಡಿಸಲಾದ ಆಹಾರವನ್ನು ವ್ಯರ್ಥ ಮಾಡಕೂಡದು.
9. ವಸತಿ ನಿಲಯ / ತರಬೇತಿ ವೇಳಾ ಪಟ್ಟಿಯನ್ನು ಕಡ್ಡಾಯವಾಗಿ ಪಾಲಿಸುವುದು. ಅಭ್ಯರ್ಥಿಗಳ ಯಾವುದೇ ಬೆಲೆ ಬಾಳುವ ವಸ್ತುಗಳನ್ನು ವಸತಿ ನಿಲಯದ ಕೊಠಡಿಗಳಲ್ಲಿ ಇಡುವಂತಿಲ್ಲ ಹಾಗೂ ಅಭ್ಯರ್ಥಿಗಳ ಯಾವುದೇ ವಸ್ತುಗಳ ಸುರಕ್ಷತೆಗೆ ಸಂಸ್ಥೆಯು ಹೊಣೆಯಾಗಿರುವುದಿಲ್ಲ.
10. ಹೌಸ್-ಕೀಪಿಂಗ್ ಸಿಬ್ಬಂದಿ ಮತ್ತು ಕೇಟರಿಂಗ್ ಸಿಬ್ಬಂದಿಗಳೊಂದಿಗೆ ಅನಾವಶ್ಯಕ ಸಂವಾದ ನಡೆಸುವಂತಿಲ್ಲ. ಆವರಣ ಮತ್ತು ವಸತಿ ನಿಲಯದ ಕೊಠಡಿಗಳ ಸ್ವಚ್ಛತೆ ಮತ್ತು ನೈರ್ಮಲ್ಯ ವಿಷಯದಲ್ಲಿ ಸಂಸ್ಥೆಯ ಸಿಬ್ಬಂದಿ / ಅಧಿಕಾರಿಗಳು ಕಾಲಕಾಲಕ್ಕೆ ನೀಡುವ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

Scanned by CamScanner

11. ಆನ್‌ಲೈನ್‌ನಲ್ಲಿ ಅಥವಾ ಹೊರಗಡೆಯಿಂದ ಆಹಾರ ಪದಾರ್ಥಗಳನ್ನು / ಯಾವುದೇ ವಸ್ತುಗಳನ್ನು ತರಿಸಿಕೊಳ್ಳುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

12. ವಿತ್ತೀಯ ಕಾರ್ಯನೀತಿ ಸಂಸ್ಥೆಯು ಶೈಕ್ಷಣಿಕ ಸಂಸ್ಥೆಯಾಗಿದ್ದು, ಆವರಣದಲ್ಲಿ ಸಿಗರೇಟ್, ಮದ್ಯಪಾನ ಇತ್ಯಾದಿ ಕಾನೂನುಬಾಹಿರ ವಸ್ತುಗಳ ಸೇವನೆ / ಚಟುವಟಿಕೆಗಳಿಗೆ ನಿಷೇಧವಿರುತ್ತದೆ.

13. ತರಬೇತಿ ಹಾಜರಾದವರು ಪ್ರಾರಂಭದಿಂದ ಅಂತ್ಯದವರೆಗೂ ಸಂಸ್ಥೆಯ ವಸತಿಗೃಹದಲ್ಲಿ ವಾಸ್ತವ್ಯ ಇರುವುದು. ಆವರಣದಲ್ಲಿ ಅನವಶ್ಯಕವಾಗಿ ಓಡಾಡುವುದು, ಗುಂಪುಗೂಡುವುದು ಮತ್ತು ಅನಗತ್ಯ ಪ್ರಯಾಣವನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

14. ಪ್ರತಿ ದಿನ ಸಂಸ್ಥೆಯ ಪ್ರವೇಶ ದ್ವಾರದಲ್ಲಿ ದೇಹದ ಉಷ್ಣತೆ ಪರೀಕ್ಷೆ ಮತ್ತು ಸ್ಯಾನಿಟೈಸ್ ಮಾಡಿಸಿಕೊಳ್ಳುವುದು. ಯಾರಿಗಾದರೂ ಅನಾರೋಗ್ಯಕರ ಲಕ್ಷಣ ಕಂಡುಬಂದಲ್ಲಿ ಕೂಡಲೇ ತಮ್ಮ ತರಬೇತಿ ನಿರ್ದೇಶಕರು/ ವಾರ್ಡನ್/ಸಹಾಯಕ ವಾರ್ಡನ್ ಇವರಿಗೆ ಮಾಹಿತಿ ನೀಡಿ ಶಿಷ್ಟಾಚಾರದಡಿ ಸರ್ಕಾರವು ಸೂಚಿಸಿದ ನಿಗದಿತ ಆಸ್ಪತ್ರೆಯನ್ನು ಭೇಟಿಮಾಡುವುದು.

15. ತರಬೇತಿ ಕೊಠಡಿಯಲ್ಲಿ ಪ್ರಶಿಕ್ಷಣಾರ್ಥಿಗಳು ಪರಸ್ಪರ ಸುರಕ್ಷಿತ ಅಂತರದಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸುವುದರೊಂದಿಗೆ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಆಸೀನರಾಗುವುದು.

16. ಸಂಸ್ಥೆಯ ಆವರಣದಲ್ಲಿ ಮತ್ತು ತರಬೇತಿ ಸಮಯದಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸುವುದು. ಕೈಯನ್ನು ಆಗಾಗ್ಗೆ ಸೋಪ್/ಸ್ಯಾನಿಟೈಸರ್-ನಿಂದ ಶುಚಿಗೊಳಿಸುವುದು ಮತ್ತು ವೈಯಕ್ತಿಕ ಶುಚಿತ್ವದ ಕಡೆ ಗಮನಕೊಡುವುದು. ಪ್ರಶಿಕ್ಷಣಾರ್ಥಿಗಳು ಆವರಣದಲ್ಲಿ ಕಸದ ಬುಟ್ಟಿಯನ್ನು ಬಳಸುವುದು ಮತ್ತು ಎಲ್ಲೆಂದರಲ್ಲಿ ಉಗುಳುವಂತಿಲ್ಲ. ಪ್ರಶಿಕ್ಷಣಾರ್ಥಿಗಳು ತಮ್ಮ ಸ್ವಂತ ಸ್ಯಾನಿಟೈಜರ್ ಬಾಟಲಿಯನ್ನು ತಮ್ಮ ಬಳಿ ಸದಾ ಇಟ್ಟುಕೊಂಡಿರತಕ್ಕದ್ದು.

17. ಸಂಸ್ಥೆಯ ಆವರಣದೊಳಗಡೆ ಯಾವುದೇ ವಾಹನಗಳ ಪ್ರವೇಶ / ವೈಯುಕ್ತಿಕ ವಾಹನಗಳ ನಿಲುಗಡೆಯನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ತರಬೇತಿ ಅವಧಿಯಲ್ಲಿ ಸಂಸ್ಥೆಯ ಆವರಣದೊಳಗಡೆ ಯಾವುದೇ ಸದಸ್ಯರ / ಸಂದರ್ಶಕರ / ಅತಿಥಿಗಳ ಪ್ರವೇಶ / ಭೇಟಿಗೆ ಅವಕಾಶವಿರುವುದಿಲ್ಲ.

18. "ನಿಮ್ಮ ಆರೋಗ್ಯ ಅಕ್ಷರಶಃ ನಿಮ್ಮ ಕೈಯಲ್ಲೇ ಇದೆ." ಈ ಎಲ್ಲಾ ಸೂಚನೆಗಳನ್ನು ಪ್ರಸ್ತುತ ಸಂದರ್ಭದಲ್ಲಿ ನಿಮ್ಮ ಹೆಚ್ಚಿನ ಆರೋಗ್ಯ ಸುರಕ್ಷತೆಗಾಗಿ ನೀಡಲಾಗಿದ್ದು, ಇವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ನಿಮ್ಮ ಸಹಕಾರ ಕೋರಲಾಗಿದೆ. ಪ್ರಶಿಕ್ಷಣಾರ್ಥಿಗಳು ತಮ್ಮ ಆರೋಗ್ಯದ ವಿಷಯದಲ್ಲಿ ಸ್ವಯಂ ಸುರಕ್ಷತೆಯನ್ನು ಪಾಲಿಸುವುದು. ಆರೋಗ್ಯದ ತೊಂದರೆಗಳು ಕಂಡುಬಂದಲ್ಲಿ ರಾಷ್ಟ್ರೀಯ ಉಚಿತ ಸಹಾಯವಾಣಿ 1075ಕ್ಕೆ ಅಥವಾ ರಾಜ್ಯ ಆರೋಗ್ಯ ಸಹಾಯವಾಣಿ 14410 ಸಂಖ್ಯೆಗೆ ಕರೆಮಾಡಿ ಮಾಹಿತಿ ಪಡೆಯಿರಿ.

Scanned by CamScanner

ANNEXURE - I

# ವಿತ್ತೀಯ ಕಾರ್ಯನೀತಿ ಸಂಸ್ಥೆ

## ಪ್ರಶಿಕ್ಷಣಾರ್ಥಿಗಳು ಕೋವಿಡ್-19 ಸುರಕ್ಷಾ ಕ್ರಮ ಸಂಬಂಧ ನೀಡಬೇಕಾದ
## ಸ್ವಯಂ - ಘೋಷಣಾಪತ್ರ
## (Self-Declaration)

1. ನಾನು ಇತ್ತೀಚೆಗೆ ಕೋವಿಡ್ 19 ಇರುವ ವ್ಯಕ್ತಿಗಳ ಸಂಪರ್ಕವನ್ನು ಹೊಂದಿರುವುದಿಲ್ಲ. ಹಾಗೂ ನಾನು ಈ ಹಿಂದಿನ 30 ದಿನಗಳಲ್ಲಿ ಕಡ್ಡಾಯ ಕ್ವಾರಂಟೈನ್‌ಗೆ ಒಳಗಾಗಿರುವುದಿಲ್ಲ. ಮತ್ತು ಕೋವಿಡ್ 19 ಸಂಬಂಧ ಎರಡು ಬಾರಿ ಲಸಿಕೆಯನ್ನು ತೆಗೆದುಕೊಂಡಿರುತ್ತೇನೆಂದು ಘೋಷಿಸುತ್ತೇನೆ. ಈ ಘೋಷಣಾ ಪತ್ರದೊಂದಿಗೆ 02 ಲಸಿಕೆ ಪಡೆದ ಪ್ರಮಾಣ ಪತ್ರವನ್ನು ಇದರೊಂದಿಗೆ ಲಗತ್ತಿಸಿ ಸಲ್ಲಿಸಿರುತ್ತೇನೆ.
2. ಸರ್ಕಾರದ ನಿರ್ದೇಶನಗಳನ್ವಯ ಕೋವಿಡ್-19 ಪಿಡುಗಿನ ಈ ಸಂದರ್ಭದಲ್ಲಿ ಪ್ರಶಿಕ್ಷಣಾರ್ಥಿಯಾಗಿ ಸಾರ್ವಜನಿಕರ ಆರೋಗ್ಯ ಮತ್ತು ಸುರಕ್ಷತೆ ಕಾಪಾಡುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಲ್ಲಿ ಮತ್ತು ಸಮುದಾಯದ ಆರೋಗ್ಯ ಮತ್ತು ಯೋಗಕ್ಷೇಮದ ವಿಚಾರವು ಅತ್ಯಂತ ಆದ್ಯತೆಯಾಗಿರುವುದನ್ನು ಮನಗಾಣುವಲ್ಲಿ ಒಬ್ಬ ಜವಾಬ್ದಾರಿಯುತ ನಾಗರಿಕನಾಗಿ ವರ್ತಿಸುತ್ತೇನೆಂದು ಈ ಮೂಲಕ ಘೋಷಿಸುತ್ತೇನೆ.
3. ನಾನು ಈ ಸಂಬಂಧ ವಿತ್ತೀಯ ಕಾರ್ಯನೀತಿ ಸಂಸ್ಥೆಯು ಕಾಲಕಾಲಕ್ಕೆ ನೀಡಿರುವ ಸೂಚನೆಗಳನ್ನು ಓದಿಕೊಂಡಿರುತ್ತೇನೆ ಮತ್ತು ಕಟ್ಟುನಿಟ್ಟಾಗಿ ಪಾಲಿಸುತ್ತೇನೆ. ಈ ಸಂಬಂಧ ನೀಡಲಾಗಿರುವ ಯಾವುದೇ ರೀತಿಯ ಸೂಚನೆ / ನಿಯಮಗಳಿಗೆ ವ್ಯತಿರಿಕ್ತವಾಗಿ ನಡೆದುಕೊಂಡಲ್ಲಿ ಈ ಬಗ್ಗೆ ಸಂಸ್ಥೆಯು ತೆಗೆದುಕೊಳ್ಳುವ ಸೂಕ್ತ ಕ್ರಮಕ್ಕೆ ನನ್ನ ಒಪ್ಪಿಗೆ ಇರುತ್ತದೆ.

ಪ್ರಶಿಕ್ಷಣಾರ್ಥಿ
ಹೆಸರು ಮತ್ತು ಸಹಿ

ದಿನಾಂಕ :
ಸ್ಥಳ :

Scanned by CamScanner